# MAY 04, 2026

## AKASHAVANI - DHARWAD

## PRADESH SAMACHARA (KANNADA) 12.00 P.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ** ವಿಧಾನಸಭೆ ಕ್ಷೇತ್ರಗಳ ಉಪ ಚುನಾವಣೆಯ ಮತ ಎಣಿಕೆ ಪ್ರಕ್ರಿಯೆ, ಪ್ರಸ್ತುತ ಪ್ರಗತಿಯಲ್ಲಿದೆ. ಬಾಗಲಕೋಟೆ ವಿಧಾನಸಭೆ ಕ್ಷೇತ್ರದ ಮತ ಎಣಿಕೆ, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಮುಂದುವರಿದಿದ್ದು, 15 ನೇ ಸುತ್ತಿನ ಮತ ಎಣಿಕೆ ಬಳಿಕ, ಕಾಂಗ್ರೆಸ್ ಅಭ್ಯರ್ಥಿ ಉಮೇಶ ಹುಲ್ಲಪ್ಪ ಮೇಟಿ 9 ಸಾವಿರದ 555 ಮತಗಳ ಮುನ್ನಡೆ ಸಾಧಿಸಿದ್ದಾರೆ. ದಾವಣಗೆರೆ ದಕ್ಷಿಣ ವಿಧಾನಸಭೆ ಕ್ಷೇತ್ರದ ಮತ ಎಣಿಕೆ, ನಗರದ ಡಿ.ಆರ್.ಆರ್ ವಿದ್ಯಾಸಂಸ್ಥೆಯಲ್ಲಿ ನಡೆಯುತ್ತಿದ್ದು, ಇತ್ತೀಚಿನ ವರದಿ ಬಂದಾಗ 7 ಸುತ್ತಿನಲ್ಲಿ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ಟಿ. ದಾಸಕರಿಯಪ್ಪ ಅವರು, ಪ್ರತಿಸ್ಪರ್ಧಿ ಕಾಂಗ್ರೆಸ್ ಪಕ್ಷದ ಸಮರ್ಥ ಶ್ಯಾಮನೂರ ಎದುರು, 3 ಸಾವಿರದ 925 ಮತಗಳ ಮುನ್ನಡೆ ಸಾಧಿಸಿದ್ದಾರೆ.

<><><>

**ಅಗ್ನಿಶಾಮಕ ದಳದ ಸಿಬ್ಬಂದಿಯ,** ಶೌರ್ಯ, ಬದ್ಧತೆ ಮತ್ತು ತ್ಯಾಗಗಳನ್ನು ಗೌರವಿಸುವ ದಿನವಿಂದು. ಕರ್ತವ್ಯ ನಿರ್ವಹಣೆ ಸಂದರ್ಭದಲ್ಲಿ, ಪರಮೋಚ್ಛ ತ್ಯಾಗಗೈದ, ಅಗ್ನಿಶಾಮಕ ದಳದ ಹುತಾತ್ಮರನ್ನು ಸ್ಮರಿಸಿ, ಗೌರವಾರ್ಪಿಸುವ ಅಂತಾರಾಷ್ಟ್ರೀಯ ಅಗ್ನಿಶಾಮಕ ದಳ ಸಿಬ್ಬಂದಿ ದಿನ. ಈ ದಿನದ ಮಹತ್ವ ಹಾಗೂ ಅಗ್ನಿಶಾಮಕ ದಳದ ತುರ್ತು ಕಾರ್ಯಾಚರಣೆಗಳ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ರಾಯಚೂರು ಜಿಲ್ಲಾ ಅಗ್ನಿಶಾಮಕ ದಳದ ಅಧಿಕಾರಿ, ರವೀಂದ್ರ ಘಾಟಗೆ . . .

<><><>

**ನಾಳೆ, ರಾಯಚೂರು ನವೋದಯ** ಇಂಜಿನಿಯರಿಂಗ್ ಕಾಲೇಜು ಪರಿಸರದಲ್ಲಿ ಅಗ್ನಿಶಾಮಕ ದಳದಿಂದ, ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಅಣಕು ಕಾರ್ಯಾಚರಣೆ ಆಯೋಜಿತವಾಗಿದೆ.

<><><>

**ವಿಜಯಪುರ ಜಿಲ್ಲೆ, ರಾಷ್ಟ್ರೀಯ ಹೆದ್ದಾರಿ** 34 ರ, ಯಕ್ಕುಂಡಿ–ಕಾಖಂಡಕಿ ರಸ್ತೆಯನ್ನು 3 ಕೋಟಿ ರೂಪಾಯಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದ್ದು, ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಖಾತೆ ಸಚಿವ ಎಂ.ಬಿ ಪಾಟೀಲ್ ಚಾಲನೆ ನೀಡಿದರು. ವಿಜಯಪುರ ತಾಲ್ಲೂಕಿನ, ರಾಷ್ಟ್ರೀಯ ಹೆದ್ದಾರಿ 34 ರಿಂದ, ಹರಳಯ್ಯನಗುಂಡ ರಸ್ತೆಯವರೆಗಿನ ಸುಧಾರಣಾ ಕಾಮಗಾರಿಗೆ ಯಕ್ಕುಂಡಿ ಗ್ರಾಮದಲ್ಲಿ ಸಚಿವರು ಭೂಮಿಪೂಜೆ ನೆರವೇರಿಸಿದರು.

<><><>

**ಗದಗ ತಾಲೂಕು, ಮುಳಗುಂದ ಗ್ರಾಮದಲ್ಲಿ,** 14 ಕೋಟಿ ರೂಪಾಯಿ ವೆಚ್ಚದ ಕೆ.ಇ.ಬಿ. ಗ್ರಿಡ್ ನಿರ್ಮಾಣ ಕಾಮಗಾರಿಗೆ, ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ, ಚಾಲನೆ ನೀಡಿದರು.

<><><>

**ಕೋಲಾರ** ತಾಲೂಕು ಕ್ಯಾಲನೂರು ಬಳಿ, 6 ಕೋಟಿ ರೂಪಾಯಿ ಹಾಗೂ ಛತ್ರಕೋಡಹಳ್ಳಿ ಬಳಿ 4 ಕೋಟಿ ರೂಪಾಯಿ ವೆಚ್ಚದಲ್ಲಿ, ಹೊಸ ಸೇತುವೆಗಳ ನಿರ್ಮಾಣವಾಗಲಿದೆ ಎಂದು, ಕೋಲಾರ ಶಾಸಕ ಕೊತ್ತೂರು ಮಂಜುನಾಥ ತಿಳಿಸಿದ್ದಾರೆ.

<><><>

**ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ಬಿಡನಾಳದ,** ಶ್ರೀ ಆರ್.ಕೆ. ಪಾಟೀಲ ಪಬ್ಲಿಕ್ ಸ್ಕೂಲ್, ಪದವಿಪೂರ್ವ ಮಹಾವಿದ್ಯಾಲಯವಾಗಿ, ಉನ್ನತೀಕರಿಸಿದ್ದು, ಶಾಸಕ ಪ್ರಸಾದ ಅಬ್ಬಯ್ಯ ಭೇಟಿ ನೀಡಿ, ಪರಿಶೀಲಿಸಿದರು. ಶಿಕ್ಷಣ ಇಲಾಖೆ ಹಿರಿಯ ಅಧಿಕಾರಿಗಳಾದ, ತೇಜಸ್ವಿನಿ ನಾರಾಯಣಕರ ಹಾಗೂ ಉಮೇಶ ಬೊಮ್ಮಕ್ಕನವರ, ಪಾಲ್ಗೊಂಡಿದ್ದರು.

<><><>

**ಐಟಿಎಫ್ ವಿಮೆನ್ಸ್-35, ಟೆನಿಸ್ ಕ್ರೀಡಾಕೂಟ** ಇಂದಿನಿಂದ, ತುಮಕೂರಿನಲ್ಲಿ ಪ್ರಾರಂಭವಾಗಲಿದ್ದು, ಓಪನ್ ಮಹಿಳಾ ಚಾಂಪಿಯನ್ ಶಿಪ್‌ನಲ್ಲಿ 9 ದೇಶಗಳ ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. ವಿಜೇತರಿಗೆ 28 ಲಕ್ಷ ಬಹುಮಾನ ನೀಡಲಾಗುವುದು ಎಂದು ಗೃಹ ಸಚಿವ ಡಾಕ್ಟರ ಜಿ.ಪರಮೇಶ್ವರ್ ತಿಳಿಸಿದ್ದಾರೆ.

<><><>

**ಮುಂದಿನ ಏಳು ದಿನಗಳ ಕಾಲ,** ರಾಜ್ಯಾದ್ಯಂತ ಒಣ ಹವೆ ಹಾಗೂ ಬಿಸಿಲಿನ ವಾತಾವರಣ ಮುಂದುವರಿಯುವ ಸಾಧ್ಯತೆ ಇದೆ. ರಾಜ್ಯದ ಹಲವು ಭಾಗಗಳಲ್ಲಿ, ಅಲ್ಲಲ್ಲಿ ಗುಡುಗು-ಸಿಡಿಲು ಸಹಿತ ಜೋರಾದ ಗಾಳಿಯೊಂದಿಗೆ, ಹಗುರ, ಸಾಧಾರಣ ಮಳೆಯಾಗುವ, ಸಾಧ್ಯತೆ ಇದೆ ಎಂದು, ರಾಜ್ಯ ಹವಾಮಾನ ಇಲಾಖೆಯ, ಹಿರಿಯ ವಿಜ್ಞಾನಿ, ಬೆಂಗಳೂರಿನ ಸಿ.ಎಸ್. ಪಾಟೀಲ, ತಿಳಿಸಿದ್ದಾರೆ.

<><><>

**ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆಯಂತೆ,** ನಾಳೆಯ ವರೆಗೆ, ಯಾದಗಿರಿ ಜಿಲ್ಲೆಯಾದ್ಯಂತ, ಬಿಸಿಗಾಳಿ ತೀವ್ರಗೊಳ್ಳುವ ಸಾಧ್ಯತೆ ಇದೆ. ಯೆಲ್ಲೋ ಅಲರ್ಟ್' ಘೋಷಿಸಲಾಗಿದೆ. ಜಿಲ್ಲಾಧಿಕಾರಿ ಹರ್ಷಲ್ ಭೋಯರ್, ಬಿಸಿಗಾಳಿ ಹಾಗೂ ಉಷ್ಣಾಘಾತ, ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇದ್ದು, ಮಧ್ಯಾಹ್ನ 12 ರಿಂದ ಸಂಜೆ 4 ಗಂಟೆ ವರೆಗೆ, ಮನೆಯಿಂದ ಹೊರ ಹೋಗದಂತೆ, ಬಿಸಿಲಿನಲ್ಲಿ ಶ್ರಮದಾಯಕ ಕೆಲಸ ಮಾಡದಂತೆ ಹಾಗೂ ಮುಂಜಾಗ್ರತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ, ಸೂಚಿಸಿದ್ದಾರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>